ಬಾಳಿನ ಭವಿಷ್ಯದಲ್ಲಿ ಸುಖ-ದುಃಖ, ಸೋಲು-ಗೆಲುವು, ನೋವು-ನಲಿವು ಇವುಗಳನ್ನೆಲ್ಲಾ ಪ್ರತಿಯೊಬ್ಬ ಜೀವಿಯೂ ಎದುರಿಸಲೇಬೇಕು. ಇವಕ್ಕೆ ಮಿಗಿಲಾಗಿ ವೃದ್ಧಾಪ್ಯ, ಅದಕ್ಕೆ ಸಂಬಂಧಪಟ್ಟ ಅನಾರೋಗ್ಯ ಮತ್ತು ಕಟ್ಟಕಡೆಯದಾಗಿ ಇವೆಲ್ಲವನ್ನೂ ಮುಗಿಸಿಬಿಡುವ ಮೃತ್ಯು - ಇವು ಅನಿವಾರ್ಯ.

ಈ ಸಾವಿನ ಬಗ್ಗೆ ಹೇಳುವಾಗ ವರಕವಿ ದ.ರಾ. ಬೇಂದ್ರೆಯವರು ಅದ್ಭುತವಾದ ಒಂದು ಮಾತನ್ನು ಹೇಳುತ್ತಾರೆ:

ಸಾವಿಗೆ ನಾ ಹೆದರುವುದಿಲ್ಲ
ಯಾಕಂದರ ನಾನಿರೋತನಕ
ಅದು ಬರೋದಿಲ್ಲ
ಅದು ಬಂದಾಗ ನಾ ಇರೋದಿಲ್ಲ!

ಒಂದು ದೃಷ್ಟಾಂತ : ಸೂರ್ಯವಂಶದಲ್ಲಿ ಶ್ರೀರಾಮಚಂದ್ರನ ಪೂರ್ವಜರಲ್ಲಿ ಒಬ್ಬರಾದ ಖಟ್ವಾಂಗ ಎಂಬ ಮಹಾರಾಜನ ಕಥೆಯನ್ನು ಡೋಂಗ್ರೆ ಮಹಾರಾಜರು ತಮ್ಮ 'ತತ್ತ್ವಾರ್ಥ ರಾಮಾಯಣ'ದಲ್ಲಿ ಸುಂದರವಾಗಿ ವರ್ಣಿಸುತ್ತಾರೆ :

ಒಮ್ಮೆ ರಾಜ ಖಟ್ವಾಂಗನು ದೈತ್ಯರನ್ನು ಸೋಲಿಸುವುದರಲ್ಲಿ ದೇವತೆಗಳಿಗೆ ಸಹಾಯ ಮಾಡಿದ್ದನು. ಇದರಿಂದ ಪ್ರಸನ್ನರಾದ ದೇವತೆಗಳು ರಾಜನಿಗೆ ಬೇಕಾದ ವರವನ್ನು ಯಾಚಿಸಲು ಹೇಳಿದರು. ಆಗ ಖಟ್ವಾಂಗ ಮಹಾರಾಜನ ಮನಸ್ಸಿನಲ್ಲಿ, 'ಯಾರಿಗೆ ನನ್ನ ಸಹಾಯದ ಆವಶ್ಯಕತೆಯಾಯಿತೋ ಅವರು ನನಗೇನು ವರ ಕೊಡಬಲ್ಲರು?' ಎಂಬ ವಿಚಾರ ಬಂದು ಅವನು ದೇವತೆಗಳಿಗೆ ''ನನಗೆ ಯಾವ ವರವೂ ಬೇಡ. ನನ್ನ ಆಯುಸ್ಸು ಇನ್ನೂ ಎಷ್ಟು ಉಳಿದಿದೆ ಎಂಬುದನ್ನು ತಿಳಿಸಿ'' ಎಂದನು. ಆಗ ದೇವತೆಗಳು ''ನಿನ್ನ ಆಯುಷ್ಯದ ಒಂದು ಪ್ರಹರ ಎಂದರೆ ೪೮ ನಿಮಿಷಗಳ ಅವಧಿ ಮಾತ್ರ ಉಳಿದಿದೆ''ಎಂದರು. ಇದನ್ನು ಕೇಳಿದ ರಾಜ ಖಟ್ವಾಂಗನು ಯಾವ ವಿಚಾರವನ್ನೂ ಮಾಡದೆ ಒಡನೆಯೇ ತನ್ನ ಸರ್ವಸ್ವವನ್ನು ತ್ಯಾಗ ಮಾಡಿ ಮನಸ್ಸನ್ನು ಭಗವಂತನಲ್ಲಿ ಏಕಾಗ್ರಗೊಳಿಸಿದ. ಭಗವದ್ಧ್ಯಾನ ಮಾಡುತ್ತಲೇ ಶರೀರವನ್ನು ತ್ಯಜಿಸಿ, ಅತ್ಯಲ್ಪ ಸಮಯದಲ್ಲಿಯೇ ಜನನ-ಮರಣ ಚಕ್ರದಿಂದ ಪಾರಾಗಿ ತನ್ನ ಕಲ್ಯಾಣವನ್ನು ಸಾಧಿಸಿದ್ದ ಖಟ್ವಾಂಗ ಮಹಾರಾಜ!

ಆದ್ದರಿಂದ ''ಕಳೆದುಹೋದ ಸಮಯದ ಬಗ್ಗೆ ಚಿಂತನೆ ಮಾಡಬಾರದು. ಭೂತಕಾಲವನ್ನು ಚಿಂತಿಸುವುದರಿಂದ ಶೋಕವುಂಟಾಗುವುದು. ಭವಿಷ್ಯದ ವಿಚಾರ ಮಾಡುವುದರಿಂದ ಭಯವಾಗುವುದು. ಆದ್ದರಿಂದ ಕೇವಲ ವರ್ತಮಾನದ್ದೇ ವಿಚಾರ ಮಾಡಿರಿ, ವರ್ತಮಾನವನ್ನು ಸುಧಾರಿಸಿರಿ. ಜೀವನದಲ್ಲಿ ಉಳಿದಿರುವ ಸಮಯದಲ್ಲಿ ಸತತವಾಗಿ ನಾರಾಯಣನ ಸ್ಮರಣೆ ಮಾಡಿದಲ್ಲಿ ಜೀವನವು ಸುಧಾರಿಸುವುದು''ಎನ್ನುತ್ತಾರೆ, ಶ್ರೀ ಡೋಂಗ್ರೆ ಮಹಾರಾಜರು.

ಆದ್ದರಿಂದ ಕಾಲಸ್ವರೂಪನಾದ ಭಗವಂತನೇ ನಮಗೆಲ್ಲ ಶರಣು. ಶ್ರೀ ಕೃಷ್ಣನು ಗೀತೆಯಲ್ಲಿ,

'ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ' - ನಾನೇ ಸಮಸ್ತ ಭೂತಗಳ ಆದಿ ಮಧ್ಯ ಮತ್ತು ಅಂತ್ಯ ಎನ್ನುತ್ತಾನೆ. *(ಗೀತೆ, ೧೦-೨೦)*

ಶ್ರೀ ಶಂಕರಭಗವತ್ಪಾದರು,

ಆಯುರ್ನಶ್ಯತಿ ಪಶ್ಯತಾಂ ಪ್ರತಿದಿನಂ ಯಾತಿ ಕ್ಷಯಂ ಯೌವನಂ
ಪ್ರತ್ಯಾಯಾಂತಿ ಗತಾಃ ಪುನರ್ನ ದಿವಸಾಃ ಕಾಲೋ ಜಗದ್ಭಕ್ಷಕಃ ।

ಎನ್ನುತ್ತಾರೆ.

ಎಂದರೆ 'ನೋಡನೋಡುತ್ತಲೇ ಆಯುಸ್ಸು ನಾಶವಾಗುತ್ತದೆ. ಯೌವನವು ದಿನದಿನಕ್ಕೂ ಕ್ಷಯವಾಗುತ್ತದೆ. ಕಳೆದುಹೋದ ದಿನಗಳು ಮತ್ತೆ ಹಿಂದಿರುಗುವುದಿಲ್ಲ. ಕಾಲವು ಇಡೀ ಜಗತ್ತನ್ನೇ ನುಂಗುತ್ತದೆ' ಎಂಬುದಾಗಿ ಕಾಲವನ್ನು ಅದ್ಭುತವಾಗಿ ವರ್ಣಿಸುತ್ತಾರೆ.

ಹೀಗೆ ಯಾವುದೂ ನಮ್ಮ ಕೈಯಲ್ಲಲ್ಲವೆಂದಮೇಲೆ ಸುಮ್ಮನೆ ಭ್ರಮೆಗೆ ಏಕೆ ಒಳಗಾಗಬೇಕು? ಅಂದು ಎಂಬುದು ಬಿಟ್ಟು ಹೋಗಲಿ, ಇಂದು ವ್ಯವಸ್ಥಿತವಾಗಿ ಕಳೆಯಲಿ, ಮುಂದು ಭಗವದಿಚ್ಛೆಯಂತಾಗಲಿ. ಈ ಚಿಂತನೆ ಮುಂದೆಂದೂ ಮಾಸದೆ ಎಂದೆಂದೂ ನಮಗೆ ಊರ್ಧ್ವಗತಿಯಲ್ಲಿ ಸಾಗಲು ಮಾರ್ಗದರ್ಶಿಯಾಗಲಿ.

ರಾತ್ರಿ ಕಳೆಯಿತು ನಿದ್ರೆಯಲಿ
ದಿನ ಕಳೆಯಿತು ಕೂಟದಲಿ
ರತ್ನದಂಥ ಈ ನರಜನ್ಮ
ಮೂರ್ಕಾಸಿಗೆ ಹೋಯ್ತು - ಕಬೀರಾ ॥

ಮಾಯೆ-ಮೋಹ ಜಂಜಾಟದಲೆ
ದಿನ ಸುಮ್ಮನೆ ಹೋಯ್ತು
ಮನದಿ ನಾಮ ನಿಲಲಿಲ್ಲವಿನ್ನೂ
ಈ ಯಮ ಬಂದಾಯ್ತು - ಕಬೀರಾ ॥

- ಎನ್ನುವಂತಾಗಬಾರದು.

ಆದ್ದರಿಂದ ಎಚ್ಚೆತ್ತುಕೊಳ್ಳೋಣ. ಸಂದುಹೋದ ದಿನಗಳನ್ನು ಸುಮ್ಮನೆ ಎಣಿಸದೆ, ಮುಂದಿನ ದಿನಗಳನ್ನು ವ್ಯರ್ಥವಾಗಿ ಚಿಂತಿಸದೆ ಇರೋಣ. ❋

ಜೀವನವನ್ನೆಲ್ಲಾ ಪಾಪ, ನರಕವೆಂದು ಹಳಿಯುತ್ತ ಏಕೆ ಕಾಲ ಕಳೆಯುತ್ತೀರಿ? ಒಂದು ಸಲ, ''ಹೇ ಭಗವಂತ! ನಾನು ಮಾಡಬಾರದ ಅನೇಕ ಕೆಲಸಗಳನ್ನು ಮಾಡಿರುವೆನು. ಮಾಡಬೇಕಾದ ಹಲವು ಕೆಲಸಗಳನ್ನು ಮಾಡಿಲ್ಲ. ನನ್ನನ್ನು ಕ್ಷಮಿಸು'' ಎಂದು ಪ್ರಾರ್ಥಿಸಿ ಅವನನ್ನು ನಂಬಿ. ನೀವು ಎಲ್ಲ ಪಾಪಗಳಿಂದಲೂ ಪಾರಾಗುವಿರಿ.

— ಶ್ರೀರಾಮಕೃಷ್ಣರು

ಬ್ರಹ್ಮಜ್ಞಾನಿ ಶುಕದೇವ

ಕಥೆ: ಪರಮಹಂಸದಾಸ ಚಿತ್ರ: ಶಂಕರ್

ವ್ಯಾಸಪುತ್ರನಾದ ಶುಕದೇವ ಮಹಾಜ್ಞಾನಿ. ಆತನಿಗೆ ಹುಟ್ಟಿನಿಂದಲೇ ಜ್ಞಾನೋದಯವಾಗಿತ್ತು. ವ್ಯಾಸರು ತಮ್ಮ ಮಗನಿಗೆ ಪರಂಪರಾಗತವಾದ ವಿದ್ಯೆಯನ್ನೆಲ್ಲ ಧಾರೆಯೆರೆದರು.



ಜನಕ ಮಹಾರಾಜನನ್ನು 'ವಿದೇಹ'ನೆಂದೂ ಕರೆಯುತ್ತಿದ್ದರು. ಅಂದರೆ ಆತ ದೇಹಾಭಿಮಾನ ಶೂನ್ಯನಾಗಿದ್ದ; ದೇಹದ ಮೂಲಕ ವ್ಯವಹರಿಸುತ್ತಿದ್ದರೂ, ತನ್ನ ದೇಹಕ್ಕೆ ಅಂಟಿಕೊಂಡಿರಲಿಲ್ಲ. ರಾಜನಾಗಿ ತನ್ನ ಧರ್ಮಕ್ಕನುಗುಣವಾಗಿ ರಾಜ್ಯಭಾರ ಮಾಡುತ್ತಿದ್ದ. ಆದರೆ ತನ್ನ ರಾಜತ್ವಕ್ಕೆ ಅಂಟಿಕೊಂಡಿರಲಿಲ್ಲ. ಆತ ಸದಾ ಬ್ರಹ್ಮಚಿಂತನೆಯಲ್ಲೇ ತೊಡಗಿದ್ದ. ತನ್ನ ದಿವ್ಯದೃಷ್ಟಿಯಿಂದ ಶುಕದೇವನು ತನ್ನ ಅರಮನೆಗೆ ಬರುವುದನ್ನು ಆತ ಮೊದಲೇ ಮನಗಂಡಿದ್ದ.





ಸ್ವಲ್ಪ ಹೊತ್ತಿನಲ್ಲೇ ಶುಕದೇವನು ಅರಮನೆಯನ್ನು ಪ್ರವೇಶಿಸಿದನು. ಯಾರೂ ಅವನನ್ನು ಸ್ವಾಗತಿಸಲಿಲ್ಲ. ಅವನಿಗೆ ಕಿಂಚಿತ್ತಾದರೂ ಮರ್ಯಾದೆಯನ್ನು ತೋರಲಿಲ್ಲ. ಹೀಗೆ ಮೂರು ದಿನ ಕಳೆಯಿತು. ಆದರೆ ಶುಕದೇವ ಸ್ವಲ್ಪವೂ ವಿಚಲಿತನಾಗಲಿಲ್ಲ. ಅರಮನೆಯ ದ್ವಾರದ ಬಳಿ ಏಕಾಂಗಿಯಾಗಿ ಕುಳಿತಿದ್ದನು.

ನಾಲ್ಕನೆಯ ದಿನ ಜನಕ ಮಹಾರಾಜನೇ ತನ್ನ ಮಂತ್ರಿ ಮತ್ತು ಇತರ ಅಧಿಕಾರಿಗಳೊಡನೆ ಶುಕದೇವನನ್ನು ಸ್ವಾಗತಿಸಲು ಬಂದನು.







ರಾಜೋಚಿತವಾದ ಎಲ್ಲ ಮರ್ಯಾದೆ ಗೌರವಗಳಿಂದ ಆತನನ್ನು ಬರಮಾಡಿಕೊಳ್ಳಲಾಯಿತು. ಸುಗಂಧದ್ರವ್ಯಗಳಿಂದ ಆತನಿಗೆ ಸ್ನಾನ ಮಾಡಿಸಲಾಯಿತು. ರೇಷ್ಮೆ ವಸ್ತ್ರಾದಿಗಳಿಂದ ಅಲಂಕಾರ ಮಾಡಿ ಆತನಿಗೆ ಭಕ್ಷ್ಯಭೋಜ್ಯಾದಿಗಳನ್ನು ಕೊಡಲಾಯಿತು.

ಇದೇ ರೀತಿ ಒಂಬತ್ತು ದಿನಗಳು ಕಳೆದವು. ಈಗಲೂ ಸಹ ಶುಕದೇವನು ಸ್ವಲ್ಪವೂ ವಿಚಲಿತನಾಗಲಿಲ್ಲ. ಹತ್ತನೆಯ ದಿನ ಅವನನ್ನು ಸಭೆಗೆ ಕರೆದೊಯ್ಯಲಾಯಿತು. ಅಲ್ಲಿ ಹಾಡು, ನೃತ್ಯಗಳಿಂದ ಅವನಿಗೆ ಸ್ವಾಗತ ದೊರೆಯಿತು.